CAREERINDIA

# RR + PR

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಅಭ್ಯರ್ಥಿ + ಪುನರಾವರ್ತಿತ ಖಾಸಗಿ ಅಭ್ಯರ್ಥಿ / Regular Repeater + Private Repeater)**

***ಸಾಮಾನ್ಯ ಸೂಚನೆಗಳು :***

i) ಈ ಪ್ರಶ್ನೋತ್ತರ ಕಿರುಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 63 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಯ ಉತ್ತರಕ್ಕಾಗಿ ಜಾಗವನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಗಳ ಉತ್ತರಗಳಿಗೆ ಸಾಕಷ್ಟು ಜಾಗವನ್ನು ನೀಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಸೀಸದ ಕಡ್ಡಿ (ಪೆನ್ಸಿಲ್) ಯಿಂದ ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು–ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

viii) ನಿಮ್ಮ ಪ್ರಶ್ನೋತ್ತರ ಕಿರುಪುಸ್ತಕದ ಬಲಭಾಗದಲ್ಲಿರುವ ಗೆರೆಯ ಪಕ್ಕದ ಖಾಲಿ ಜಾಗದಲ್ಲಿ ಯಾವುದೇ ರೀತಿಯ ಬರಹಗಳನ್ನು ಬರೆಯಬಾರದು.

www.careerindia.com

CAREERINDIA



ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಕನ್ನಡ ವರ್ಣಮಾಲೆಯ ವ್ಯಂಜನಾಕ್ಷರಗಳಲ್ಲಿ ಎರಡು ಮತ್ತು ನಾಲ್ಕನೆಯ ಅಕ್ಷರಗಳನ್ನು ಹೀಗೆನ್ನುತ್ತೇವೆ

   (ಎ) ಅಲ್ಪಪ್ರಾಣಗಳು (ಬಿ) ಮಹಾಪ್ರಾಣಗಳು

   (ಸಿ) ಅನುನಾಸಿಕಗಳು (ಡಿ) ಹ್ರಸ್ವ ಸ್ವರಗಳು

2. ಆದೇಶ ಸಂಧಿಗೆ ಸೂಕ್ತ ಉದಾಹರಣೆ

   (ಎ) ಸಿರಿಗನ್ನಡ (ಬಿ) ಕೈಯಾಡಿಸು

   (ಸಿ) ಮನೆಯನ್ನು (ಡಿ) ಬೇರೊಬ್ಬ

3. 'ಮೈದಡವಿ' ಪದದಲ್ಲಿ ಉಂಟಾಗಿರುವ ಸಮಾಸ

   (ಎ) ಕರ್ಮಧಾರಯ ಸಮಾಸ (ಬಿ) ಗಮಕ ಸಮಾಸ

   (ಸಿ) ಕ್ರಿಯಾ ಸಮಾಸ (ಡಿ) ತತ್ಪುರುಷ ಸಮಾಸ

4. ಬರವಣಿಗೆಯಲ್ಲಿ ಪಾರಿಭಾಷಿಕ, ವಿಶಿಷ್ಟ ಪದಗಳನ್ನು ಬಳಸಿದಾಗ ಉಪಯೋಗಿಸುವ ಲೇಖನ ಚಿಹ್ನೆ

   (ಎ) ಆವರಣ ಚಿಹ್ನೆ (ಬಿ) ಉದ್ಧರಣ ಚಿಹ್ನೆ

   (ಸಿ) ವಿವರಣಾತ್ಮಕ ಚಿಹ್ನೆ (ಡಿ) ವಾಕ್ಯವೇಷ್ಟನ ಚಿಹ್ನೆ

5. ಇವುಗಳಲ್ಲಿ ಕೃದಂತಾವ್ಯಯಕ್ಕೆ ಸೇರಿದ ಪದ

   (ಎ) ಬರೆಯುವ (ಬಿ) ತಿನ್ನಲಿಕ್ಕೆ

   (ಸಿ) ಅಂಜಿಕೆ (ಡಿ) ಚಲುವಿಕೆ

6. 'ನೋಡು' ಧಾತುವಿನ ಸಂಭಾವನಾರ್ಥಕ ರೂಪ

   (ಎ) ನೋಡನು (ಬಿ) ನೋಡಲಿ

   (ಸಿ) ನೋಡಿಯಾನು (ಡಿ) ನೋಡೋಣ

7. 'ಹೂವಾಡಿಗ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

   (ಎ) ತದ್ಧಿತಾಂತ ಭಾವನಾಮ (ಬಿ) ತದ್ಧಿತಾಂತಾವ್ಯಯ

   (ಸಿ) ಕೃದಂತನಾಮ (ಡಿ) ತದ್ಧಿತಾಂತನಾಮ

www.careerindia.com

CAREERINDIA



8. 'ತಾಸ್ಪೊತ್ತು' ಪದದ ಗ್ರಾಂಥಿಕ ರೂಪ

(ಎ) ತಾಸು ಹೊತ್ತು (ಬಿ) ತ್ರಾಸು ಹೊತ್ತು

(ಸಿ) ತನ್ನ ಸೊತ್ತು (ಡಿ) ತಾ ಸೋತು

9. ಇವುಗಳಲ್ಲಿ ಸಾಮಾನ್ಯಾವ್ಯಯಕ್ಕೆ ಉದಾಹರಣೆಯಾದ ಪದ

(ಎ) ಚೆನ್ನಾಗಿ (ಬಿ) ಆದ್ದರಿಂದ

(ಸಿ) ನಾನೇ (ಡಿ) ಧಗಧಗ

10. 'ಮರದತ್ತಣಿಂ' ಪದವು ಈ ವಿಭಕ್ತಿಯಲ್ಲಿದೆ

(ಎ) ಸಪ್ತಮೀ (ಬಿ) ಪಂಚಮೀ

(ಸಿ) ದ್ವಿತೀಯಾ (ಡಿ) ತೃತೀಯಾ

11. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯ

(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಪ್ರಶ್ನಾರ್ಥಕ ವಾಕ್ಯ (ಡಿ) ಮಿಶ್ರ ವಾಕ್ಯ

12. ಅನ್ವರ್ಥನಾಮ ಪದಕ್ಕೆ ಉದಾಹಣೆ ಇದು

(ಎ) ನದಿ (ಬಿ) ವ್ಯಾಪಾರಿ

(ಸಿ) ಕಾವೇರಿ (ಡಿ) ಶಿವ

13. 'ಶಶಕ' ಪದದ ಅರ್ಥ

(ಎ) ನಾಯಿ (ಬಿ) ಬೆಕ್ಕು

(ಸಿ) ಮೊಲ (ಡಿ) ನರಿ

14. 'ಇರ್ಪೊಡೆ' ಪದದ ಹೊಸಗನ್ನಡ ರೂಪ

(ಎ) ಇಬ್ಬರು (ಬಿ) ಇದ್ದರೂ

(ಸಿ) ಇರಲಿ (ಡಿ) ಇರುತ್ತಿತ್ತು

15. 'ಅಮೃತ' ಪದದ ತದ್ಭವ ರೂಪ

(ಎ) ಅಮೂರ್ತ (ಬಿ) ಅದ್ಭುತ

(ಸಿ) ಅಮ್ರುತ (ಡಿ) ಅಮರ್ದು

www.careerindia.com

CAREERINDIA



16. ಈ ಕೆಳಗಿನ ***'ಅ' ಪಟ್ಟಿ***ಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಪದಗಳನ್ನು ***'ಬ' ಪಟ್ಟಿ***ಯಿಂದ ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿಯೇ ಬರೆಯಿರಿ : $5 \times 1 = 5$

| *'ಅ' ಪಟ್ಟಿ* | | *'ಬ' ಪಟ್ಟಿ* | |
|---|---|---|---|
| i) | ದ್ವಿರುಕ್ತಿ | ಅ) | ಗುಳುಗುಳು |
| ii) | ನುಡಿಗಟ್ಟು | ಆ) | ಅಂಜುತಂಜುತ್ತಾ |
| iii) | ಅನುಕರಣಾವ್ಯಯ | ಇ) | ಮಾರಣ ಹೋಮ |
| iv) | ಜೋಡಿಪದ | ಈ) | ಅಂಗೈ |
| v) | ಪರ್ಷಿಯನ್ | ಉ) | ಜಂಗಾಲು |
| | | ಊ) | ತೀರ್ಥಪ್ರಸಾದ |
| | | ಋ) | ಅನಾನಸು |
| | | ಎ) | ಮುನಷಿ |

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. ರಸಿಕನಾಡಿದ ಮಾತು ...................... ಬಂದಂತೆ.

18. ನಿನ್ನ ಕಣ್ಣುಗಳಲ್ಲಿ ...................... ಉರುಳುತಿವೆ.

19. ನಿಮ್ಮ ಅದೃಷ್ಟ ಒಳ್ಳೆಯದಾಗಿದ್ದರೆ ...................... ವಜಾ ಆಗುತ್ತದೆ.

20. ಎಲ್ಲ ಒಂದೆಯೆಂಬ ...................... ಉಂಟಾದವ ಎಲ್ಲ ಸಾಧನೆಗಳ ಮಾಡಲೇನು.

21. ಅಳುವ ಕಂದನ ತುಟಿಯು ...................... ಕುಡಿಯಂಗ.

ಈ ಕೆಳಗಿನ ಪ್ರತಿ ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರ ಬರೆಯಿರಿ : $10 \times 1 = 10$

22. ಎಣ್ಣೆತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು ?

23. ಬುದ್ಧ ಯಾವುದರ ಸಾಧಕನೆಂದು ಅಂಗುಲಿಮಾಲನಿಗೆ ಹೇಳಿದ ?

24. ರಾಕೆಟ್ ಯುದ್ಧ ಪ್ರಾರಂಭಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ ?

25. ಪಶುಲೋಮನು ತನ್ನ ಪರಮಮಿತ್ರ ಯಾರೆಂದು ಹೇಳಿಕೊಂಡನು ?



www.careerindia.com

CAREERINDIA



26. ಮೃಗಗಳು ಯಾರನ್ನು ಬಾರಿಕನನ್ನಾಗಿ ನೇಮಿಸಿದವು ?

27. ವ್ಯಾಸ ವಾಲ್ಮೀಕಿ ಭಾರತದ ಯಾವ ಭಾಗದವರು ?

28. ಕವಿಯು ಲೋಗರ ವಿಕಾರಗಳನ್ನು ನೋಡಿ ಏನು ಮಾಡಬೇಕೆಂದು ಹೇಳಿದ್ದಾರೆ ?

29. ಪರಮಾನಕ್ಕೆ ಯಾವುದು ಮುಖ್ಯವೆಂದು ಗೋಪಾಲದಾಸರು ಹೇಳಿದ್ದಾರೆ ?

30. ಜನಪದರು ಬೆಳಗಾಗಿ ಎದ್ದು ಯಾರನ್ನು ನೆನೆಯುತ್ತಾರೆ ?

31. ಕವಿ ಬನವಾಸಿ ದೇಶದಲ್ಲಿ ಏನಾಗಿ ಹುಟ್ಟಲು ಬಯಸಿದ್ದಾನೆ ?

ಈ ಕೆಳಗಿನ ಪ್ರಶ್ನೆಗಳಿಗೆ **ಮೂರು** ಅಥವಾ **ನಾಲ್ಕು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : $15 \times 2 = 30$

32. ನಕ್ಕಾಗ ಮುಖದಲ್ಲಿ ಆಗುವ ಬದಲಾವಣೆ ಏನು ?

33. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲಿಮಾಲ ತನ್ನಲ್ಲೇ ಹೇಳಿಕೊಂಡಿದ್ದೇನು ?

34. ಮಹಾರಾಜ ಕಾಲೇಜಿನ ಬಗ್ಗೆ ಮಂಜಪ್ಪನವರು ಹೇಳಿರುವ ಮೆಚ್ಚುಗೆಯ ಮಾತುಗಳಾವುವು ?

35. ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪ ಅವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

36. ವ್ಯಕ್ತಿಯಲ್ಲಿ ನಿಷೇಧಾತ್ಮಕ ಭಾವನೆಗಳು ಯಾವಾಗ ಸಮೀಪ ಸುಳಿಯುವುದಿಲ್ಲ ?

37. ಭಾರತೀಯ ನೌಕಾಪಡೆಯ ಬಗ್ಗೆ ಪುರಾಣಗಳಲ್ಲಿ ಯಾವ ಉಲ್ಲೇಖಗಳು ದೊರೆಯುತ್ತವೆ ?

38. ರಕ್ಷಣಾ ಪಡೆಗಳು ರಾಷ್ಟ್ರೀಯ ಭಾವೈಕ್ಯದ ಸಂಕೇತ ಹೇಗೆ ?

39. ಅಳು–ನಗು ಎರಡೂ ಪರಸ್ಪರ ವಿರುದ್ಧವಾದುವು ಹೇಗೆ ?

40. ರಕ್ತ ಮೀರಿದ ಸಂಬಂಧದ ಹಿನ್ನೆಲೆ ಯಾವುದು ?

41. ಸತಿ, ಸ್ನೇಹ, ಬಯಕೆ, ಭಾಗ್ಯಗಳ ವಿಚಾರದಲ್ಲಿ ಕನಕದಾಸರ ಅಭಿಪ್ರಾಯವೇನು ?

42. ಜನಪದರು ತವರಿನ ಬಗೆಗೆ ಹೇಳಿರುವ ಅಭಿಯಾನದ ಮಾತುಗಳಾವುವು ?

www.careerindia.com

CAREERINDIA



43. ಯಾರಲ್ಲಿ ಶೌರ್ಯವನ್ನು ತೋರಿಸು ಎಂದು ಅರ್ಜುನ ಶಬರನಿಗೆ ಹೇಳಿದನು ?

44. ಬೇಡ ವೇಷಧಾರಿಯಾದ ಶಿವ ಅರ್ಜುನನನ್ನು ಅಪಹಾಸ್ಯ ಮಾಡಿದುದೇಕೆ ?

45. ದುರ್ಯೋಧನನ ಮೇಲೆ ಗದಾ ಪ್ರಹಾರ ಮಾಡುವಾಗ ಭೀಮನು ಕೊಟ್ಟ ಕಾರಣಗಳನ್ನು ತಿಳಿಸಿ.

46. ದುರ್ಯೋಧನನು ತೊಡೆ ಮುರಿದು ಬಿದ್ದ ರೀತಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ : $5 \times 3 = 15$

47. "ಸ್ವಾಮಿ ಅವು ನನ್ನ ಮಕ್ಕಳು"

48. "ಸಿಗುರು ತೆಗೆದ ಕಬ್ಬಿನಂತೆ ಉಷ್ಣ ಅಳಿದ ಹಾಲಿನಂತೆ"

49. "ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು! ಆದರೆ ನಮ್ಮ ನರಮಂಡಲ ಕ್ಷಮಿಸಲಾರದು"

50. "ನೀನಖಿಲ ಜಗನ್ಮಿತ್ರ"

51. "ವೇದ ಕುರಾನ ಬೈಬಲ್ ಸಿಂಧು ನೀ"

ಈ ಕವಿಗಳ / ಲೇಖಕರ ಕಾಲ, ಸ್ಥಳ ಹಾಗೂ ಕೃತಿಗಳನ್ನು ತಿಳಿಸಿ, ವಾಕ್ಯರೂಪದಲ್ಲಿ ಉತ್ತರ ಬರೆಯಿರಿ :
$2 \times 3 = 6$

52. ಕೆಂಪು ನಾರಾಯಣ

53. ಡಿ.ವಿ.ಜಿ.

54. ಈ ವಾಕ್ಯದಲ್ಲಿರುವ ಅಲಂಕಾರದ ಹೆಸರನ್ನು ಬರೆದು, ಲಕ್ಷಣದೊಂದಿಗೆ ಸಮನ್ವಯಗೊಳಿಸಿ ಬರೆಯಿರಿ : $1 \times 3 = 3$

'ಹಲ್ಲಣವಿಲ್ಲದ ಕುದುರೆ ಹತ್ತಿ ಓಡಿಸಿದಂತೆ'

55. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :
$1 \times 3 = 3$

ಕರಿಕೇಸರಿಯಂ ಕೆಣಕಿದ

ಪರಿಯಂ ಪರುಠವಿಸದಿರ್ ಮದಾಂಧತೆಯಿಂದಾಂ

www.careerindia.com

CAREERINDIA



56. ಈ ಕಳಗಿನ ಗಾದೆ ಮಾತುಗಳಲ್ಲಿ ಯಾವುದಾದರೂ ***ಒಂದನ್ನು*** ವಿಸ್ತರಿಸಿ ಬರೆಯಿರಿ : 1 × 3 = 3

— ದೇಶ ಸುತ್ತು ಕೋಶ ಓದು
— ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು
— ಮನಸ್ಸಿದ್ದರೆ ಮಾರ್ಗ

57. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4

ಅಲರೊಳಡಗಿದ ______________________________

______________________________

______________________________

______________________________ವಾಯುವಿನಂತೆ.

***ಅಥವಾ***

ಆ ರವಮಂ ______________________________

______________________________

______________________________

______________________________ಬೆಮರ್ತನುರಗಪತಾಕಂ ॥

58. ಈ ಕೆಳಗಿನ ಪದ್ಯಭಾಗದ ಭಾವಾರ್ಥವನ್ನು ಬರೆಯಿರಿ : 1 × 4 = 4

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜೆರೆಯೊಳ್ ಸಿಲ್ಕಿದ ನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದ
ರ್ಗೆರೆವಟ್ಟಾಗಿರು ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಪಿಂತೆ ತಾ
ನೆರೆದಳ್ ಪಾಲೆರೆ ವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ

59. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಎರಡು*** ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2 × 4 = 8

— ಗೌರಿ ತ್ಯಾಗಮಯಿ ಎಂಬುದನ್ನು ನಿಮ್ಮ ಮಾತುಗಳಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.
— ಮೊಲ ಸಿಂಹವನ್ನು ಕೊಂದ ಬಗೆಯನ್ನು ವಿವರಿಸಿ.
— ಮೇಷ್ಟ್ರು ತನ್ನ ಹೆಂಡತಿ ಬಗೆಗೆ ಹೇಳಿದ ಒಳ್ಳೆಯ ಮಾತುಗಳನ್ನು ಸಂಗ್ರಹವಾಗಿ ಬರೆಯಿರಿ.

60.

www.careerindia.com

CAREERINDIA



61. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ***ಒಂದು*** ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಪಾಂಡವರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.

— ಪಂಪ ಬನವಾಸಿ ದೇಶವನ್ನು ಹೇಗೆ ವರ್ಣಿಸಿದ್ದಾನೆ ?

62. — ನಿಮ್ಮನ್ನು ಚಾಮರಾಜನಗರದ ಲಯನ್ಸ್ ಪ್ರೌಢಶಾಲೆಯ 'ತುಷಾರ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ವಿಕಲಚೇತನರ ದಿನಾಚರಣೆ'ಯ ವರದಿಯನ್ನು ಪ್ರಕಟಿಸುವಂತೆ 'ವಿಜಯವಾಣಿ ಪತ್ರಿಕೆ'ಯ ಸಂಪಾದಕರಿಗೆ ಮನವಿಪತ್ರ ಬರೆಯಿರಿ. $1 \times 5 = 5$

***ಅಥವಾ***

— ನಿಮ್ಮನ್ನು ಮೈಸೂರಿನ ಬಸವೇಶ್ವರ ನಗರದ ಅನಿಕೇತನ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಕುಮುದಿನಿ' ಎಂದು ಭಾವಿಸಿಕೊಂಡು, ದಾವಣಗೆರೆಯಲ್ಲಿ ವಾಸವಾಗಿರುವ ಅಕ್ಕ ನಾಗರತ್ನಳಿಗೆ 'ರಾಜ್ಯೋತ್ಸವ ಸಮಾರಂಭ'ದ ವಿಶೇಷತೆಗಳನ್ನು ವಿವರಿಸಿ ಪತ್ರ ಬರೆಯಿರಿ.

63. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ***ಒಂದು*** ವಿಷಯವನ್ನು ಕುರಿತಂತೆ ಹದಿನೈದು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಅಂತರ್ಜಲ ಸಂರಕ್ಷಣೆಯ ಪ್ರಾಮುಖ್ಯತೆ

— ನಾನು ಮೆಚ್ಚಿದ ಪುಸ್ತಕ

— ಮೊಬೈಲ್ ಬಳಕೆಯ ಅನುಕೂಲ ಮತ್ತು ಅನಾನುಕೂಲ

www.careerindia.com